# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. **68/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಡಾ. ರಾಧ ಎಸ್ | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ | ಶ್ರೀನಿವಾಸ್ | **15.09.2025** |
| ವಯಸ್ಸು | ಃ | *49* ವರ್ಷ | |
| ವೃತ್ತಿ | ಃ | ಸಹಾಯುಕ ನಿರ್ದೇಶಕರು ಆರ್ ಎಫ್ ಎಸ್ ಎಲ್ ಮೈಸೂರು | **ಪ್ರಾ.ಸಾ. ಃ 26** |
| ವಾಸಸ್ಥಳ | ಃ | ಮೈಸೂರು | **ಚಾ.ಸಾ. ಃ 28** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನಾನು *2011* ನವೆಂಬರ್ ನಿಂದ ಇಲಿಯವರೆಗೂ ಆರ್ ಎಫ್ ಎಸ್ ಎಲ್ ಮೈಸೂರ್ ನಲ್ಲಿ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ *12.12.2023* ರಂದು ಕವಲಂದೆ ಪೊಲೀಸ್ ಠಾಣೆಯ ಮುಖ್ಯ ಪೇದೆ ನಾಗು ರವರು ಅವರ ಠಾಣಾ ಮೊಕದ್ದಮೆ ಸಂಖ್ಯೆ *148/2023* ಕ್ಕೆ ಸಂಬಂಧಿಸಿದಂತೆ *10* ಸೀಲಾದ ವಸ್ತುಗಳನ್ನು ವಿಶ್ಲೇಷಣೆಗಾಗಿ ನಮ್ಮ ಕಚೇರಿಗೆ ತಂದಿದ್ದರು. ಸದರಿ ವಸ್ತುಗಳನ್ನು ನಮ್ಮ ಸ್ವಾಗತ ವಿಭಾಗದವರು ಸ್ವೀಕರಿಸಿ ಅವುಗಳಿಗೆ ಕಚೇರಿಗೆ ಸಂಖ್ಯೆ ಆರ್ ಎಫ್ ಎಸ್ ಎಲ್ ಬಿ ಎಸ್ ಎಸ್ *1231/2023* ಎಂದು ನೀಡಿ ನಮ್ಮ ಜೀವ ಶಾಸ್ತ್ರ ವಿಭಾಗಕ್ಕೆ ಕಳುಹಿಸಿದ್ದರು. ನಾನು ಸದರಿ ವಸ್ತುಗಳನ್ನು ಸ್ವೀಕರಿಸಿ ಅವುಗಳನ್ನು ವಿಶ್ಲೇಷಣೆಗಾಗಿ ತೆಗೆದುಕೊಂಡು ನೋಡಲಾಗಿ ಅವುಗಳ ಮೇಲಿದ್ದ ಸೀಲುಗಳು ಸುಸ್ಥಿತಿಯಲ್ಲಿ ಇದ್ದವು ಮತ್ತು ತನಿಖಾಧಿಕಾರಿಯವರು ಕಳುಹಿಸಿದ್ದ ಮಾದರಿ

ಸೀಲು ಗಳಿಗೆ ಹೋಲಿಕೆ ಆಗುತ್ತಿತ್ತು. ನಾನು ಸದರಿ ವಸ್ತುಗಳನ್ನು ತೆಗೆದು ನೋಡಲಾಗಿ ಅವುಗಳು ಈ ಕಳೆಕಂಡತೆ ಇದ್ದವುಃ

*1.* ಮಣ್ಣು

*2.* ಮಾದರಿ ಮಣ್ಣು

*3.* ಒಂದು ಸ್ವಾಬ್

*4.* ಒಂದು ಜೊತೆ ಚಪ್ಪಲಿ

*5.* ಮರದ ಪೀಸುಗಳು

*6.* ಒಂದು ಮಚ್ಚು

*7.* ಒಂದು ಷರ್ಟು

*8.* ಒಂದು ಬನಿಯನ್

*9.* ಒಂದು ಅಂಡರ್ ವೇರ್

*10.* ಒಂದು ಲುಂಗಿ

ನಾನು ಸದರಿ ವಸ್ತುಗಳನ್ನು ರಸಾಯನಿಕ ಮತ್ತು ಸಿರಾಲಾಜಿ ಪರೀಕ್ಷೆಗ ಒಳಪಡಿಸಿದ್ದೆನು. ನನ್ನ ಪರೀಕ್ಷಾ ಫಲಿತಾಂಶದಂತೆ ವಸ್ತು ಸಂಖ್ಯೆ *1, 3* ರಿಂದ *10* ರಲ್ಲಿ ರಕ್ತದ ಕಲೆಗಳು ಕಂಡು ಬಂದಿದ್ದವು. ವಸ್ತು ಸಂಖ್ಯೆ *2* ರಲ್ಲಿ ಯಾವುದೇ ರಕ್ತದ ಕಲೆಗಳು ಕಂಡು ಬಂದಿರಲಿಲ್ಲ. ವಸ್ತು ಸಂಖ್ಯೆ *1, 3, 5* ರಿಂದ *10* ರಲ್ಲಿ ಇದ್ದ ರಕ್ತದ ಕಲೆಗಳು ಮಾನವನ ಬಿ ಗುಂಪಿಗೆ ಸೇರಿದ ರಕ್ತದ ಕಲೆಗಳಾಗಿದ್ದವು. ವಸ್ತು ಸಂಖ್ಯೆ *4* ರಲ್ಲಿ ಇದ್ದ ರಕ್ತದ ಕಲೆಗಳು ಅತ್ಯಲ್ಪ ಪ್ರಮಾಣ ದಲ್ಲಿ ಇದ್ದು ಸಿರಾಲಜಿ ಪರೀಕ್ಷೆಗೆ ಸಾಕಾಗಿರಲಿಲ್ಲ. ಆದ್ದರಿಂದ ಅದರ ಮೂಲ ಮತ್ತು ಗುಂಪನ್ನು ಕಂಡು ಹಿಡಿಯಲು

ಸಾಧ್ಯವಾಗಿರಲಿಲ್ಲ. ಅದರಂತೆ ನನ್ನ ಅಭಿಪ್ರಾಯ ವರದಿಯನ್ನು ನಮ್ಮ ಎಫ್.ಎಲ್.ಎಂ.ಎಸ್. ತಂತ್ರಾಂಶದ ಮುಖಾಂತರ ಇ–ಸಹಿ ಮುಖಾಂತರ ಸಂಬಂಧಿಸಿದ ಪೊಲೀಸರಿಗೆ ನೀಡಿದ್ದೆನು. ಪರೀಕ್ಷೆಯಾದ ನಂತರ ಎಲ್ಲಾ ವಸ್ತುಗಳನ್ನು ಮರು ಪ್ಯಾಕ್ ಮಾಡಿ ನಮ್ಮ ಕಚೇರಿಯ ಅರಗು ಸೀಲ್ ನೊಂದಿಗೆ ಮೊಹರು ಮಾಡಿ ಸಂಬಂಧಿಸಿದ ಪೋಲಿಸರಿಗೆ ಮಾದರಿ ಸೀಲಿನೊಂದಿಗೆ ವಾಪಸ್ಸು ನೀಡಿರುತ್ತೇನೆ. ಸಾಕ್ಷಿದಾರರು ತಮ್ಮ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–*41* ಎಂದು ಸಾಕ್ಷಿದಾರರ ಡಿಜಿಟಲ್ ಸಹಿಯನ್ನು ನಿಪಿ–*41(ಎ)* ಎಂದು ಗುರುತಿಸಲಾಯಿತು. ಸಾಕ್ಷಿದಾರರು ಮಾದರಿ ಸೀಲನ್ನು ನೋಡಿ ಗುರುತಿಸಿದ್ದು ಅದನ್ನು *42* ಎಂದು ಸಾಕ್ಷಿದಾರರ ಸಹಿ ಯನ್ನು ನಿಪಿ–*42(ಎ)* ಎಂದು ಗುರುತಿಸಲಾಯಿತು. ನಾನು ಪರೀಕ್ಷೆ ಮಾಡಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಇರುವ ವಸ್ತುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂ.ಒ–*1* ರಿಂದ *10* ಎಂದು ಗುರುತಿಸಲ್ಪಟ್ಟಿರುತ್ತವೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ *28.12.2023* ರಂದು ಒಂದು ಸೀಲಾದ ವಸ್ತುವನ್ನು ರಾಜು ಕೆ.ಎಸ್ ಎಂಬುವವರು ನಮ್ಮ ಕಛೇರಿಗೆ ವಿಶ್ಲೇಷಣೆಗಾಗಿ ತಂದಿದ್ದು ನಾವು ಆ ವಸ್ತುವನ್ನು ಸ್ವೀಕರಿಸಿ ಅದನ್ನು ಪರೀಕ್ಷೆಗೆ ಒಳಪಡಿಸಿದ್ದು ಆ ವಸ್ತು ಒಂದು ಗಾಜ್ ಪೀಸ್ ಆಗಿದ್ದು ಅದನ್ನು ರಾಸಾಯನಿಕ ಮತ್ತು ಸಿರಾಲಜಿ ಪರೀಕ್ಷೆಗೆ ಒಳಪಡಿಸಿದ್ದು ಅದರಲ್ಲಿ ಮನುಷ್ಯನ ಬಿ ಗುಂಪಿಗೆ ಸೇರಿದ ರಕ್ತದ ಕಲೆಗಳು ಇದ್ದವು. ನಾನು ಈ ಬಗ್ಗೆ ವರದಿಯನ್ನು ನೀಡಿದ್ದೆ. ಪರೀಕ್ಷೆಯಾದ ನಂತರ ಸದರಿ ವಸ್ತುವನ್ನು ಮರುಪ್ಯಾಕ್ ಮಾಡಿ ಕಛೇರಿಯ ಮೊಹರಿನೊಂದಿಗೆ ಸಂಬಂಧಿಸಿದ ಪೊಲೀಸರಿಗೆ ಕಳುಹಿಸಿದ್ದೆನು. ಸಾಕ್ಷಿದಾರರು ನೋಡಿ ಗುರುತಿಸಿದ ವರದಿಯನ್ನು ನಿಪಿ–*43* ಎಂದು ಸಾಕ್ಷಿದಾರರ

ಡಿಜಿಟಲ್ ಸಹಿಯನ್ನು ನಿಪಿ–*43*(ಎ) ಎಂದು ಗುರುತಿಸಲಾಯಿತು. ಮಾದರಿ ಸೀಲನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–*44* ಎಂದು ಸಾಕ್ಷಿದಾರರ ಸಹಿಯನ್ನು ನಿಪಿ–*44*(ಎ) ಎಂದು ಗುರುತಿಸಲಾಯಿತು.

( ಸಾಕ್ಷಿದಾರರಿಗೆ ಸೀಲು ಮಾಡಿರುವ ವಸ್ತುಗಳನ್ನು ತೆಗೆದು ಸಾಕ್ಷಿದಾರರಿಗೆ ತೋರಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಸಾಕ್ಷಿದಾರರು ಗಾಜ್ ಪೀಸ್ ಅನ್ನು ನೋಡಿ ಗುರುತಿಸಿದ್ದು ಅದನ್ನು ಎಂ.ಒ–*13* ಎಂದು ಗುರುತಿಸಲಾಯಿತು.

ಪಾಟೀ ಸವಾಲು : ಆರೋಪಿ ಪರ ವಕೀಲರಿಂದಃ-

ತನಿಖಾಧಿಕಾರಿಯವರು ಕಳುಹಿಸಿದ್ದ ಮಾದರಿ ಸೀಲಿನ ವಿವರವನ್ನು ಹಾಗೂ ಪರೀಕ್ಷೆಗಾಗಿ ಕಳುಹಿಸಿದ್ದ ವಸ್ತುಗಳ ಮೇಲಿನ ಸೀಲುಗಳ ವಿವರವನ್ನು ನಿಪಿ–*41* ಮತ್ತು *43* ರಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ನಿಪಿ–*41* ಮತ್ತು *43* ರಲ್ಲಿ ಹೇಳಿರುವ ವಸ್ತುಗಳ ಮೇಲೆ ಇದ್ದಂತಹ ಸೀಲುಗಳು ಮತ್ತು ಮಾದರಿ ಸೀಲುಗಳು ಹೋಲಿಕೆ ಯಾಗುತ್ತಿತ್ತು. ನಿಪಿ–*41* ರ ವಸ್ತು ಸಂಖ್ಯೆ *5* ಮತ್ತು *6* ರಲ್ಲಿ ಎಷ್ಟು ರಕ್ತದ ಕಲೆಗಳು ಕಂಡು ಬಂದಿದ್ದವು ಎಂದು ನಿರ್ದಿಷ್ಟವಾಗಿ ಹೇಳಿರುವುದಿಲ್ಲ ಎಂದರೆ ಸರಿ. ಮತ್ತು ಆ ಆಯುಧಗಳ ಯಾವ ಯಾವ ಭಾಗಗಳಲ್ಲಿ ರಕ್ತದ ಕಲೆಗಳು ಇದ್ದವು ಎನ್ನುವ ಬಗ್ಗೆ ನಿಖರವಾಗಿ ಹೇಳಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಆ ರಕ್ತದ ಕಲೆಗಳ ನಿಖರವಾದಂತಹ ಗಾತ್ರಗಳನ್ನು ಹೇಳಿರುವುದಿಲ್ಲ ಎಂದರೆ ಸರಿ. ಕ್ರಮ ಸಂಖ್ಯೆ *5* ಮತ್ತು *6* ರಲ್ಲಿ ರಕ್ತದ ಕಲೆಗಳು ಇದ್ದವು ಎಂದು ಏನು ಹೇಳುತ್ತೇನೆಯೋ ಆ ರಕ್ತದ ಕಲೆಗಳು ನಮ್ಮ ಪರೀಕ್ಷೆಗೆ ಸಾಕಾಗುವಷ್ಟು ಇರಲಿಲ್ಲ ಎಂದರೆ ಸರಿಯಲ್ಲ. ಕ್ರಮ ಸಂಖ್ಯೆ *5* ಮತ್ತು *6* ರಲ್ಲಿ ಇದ್ದಂತಹ ರಕ್ತದ ಕಲೆಗಳು ಕಣ್ಣಿಗೆ ಕಾಣದಂತಹ

ರಕ್ತದ ಕಲೆಗಳು ಇದ್ದು ಅವುಗಳನ್ನು ಕೇವಲ ***microscope*** ನಲ್ಲಿ ಮಾತ್ರ ನೋಡಬೇಕಾಗುತ್ತದೆ ಎಂದರೆ ಸರಿಯಲ್ಲ. ನಾನು  ಪೊಲೀಸರೊಂದಿಗೆ ಶಾಮೀಲಾಗಿ ನಿಪಿ-***41*** ಮತ್ತು ***43*** ರ ವರದಿ ನೀಡಿರುತ್ತೇನೆ ಎಂದರೆ ಸರಿ. ನಮ್ಮ ದೇಶದಲ್ಲಿ ಅಸಂಖ್ಯಾತ ಜನರ ರಕ್ತದ ಗುಂಪು ಬಿ ಗ್ರೂಪ್ ಇರುತ್ತದೆ ಎಂದರೆ ಶೇಖಡ ***30%*** ರಷ್ಟು ಜನರಲ್ಲಿ ಬಿ ಗುಂಪಿನ ರಕ್ತ ಇರುತ್ತದೆ.

**ಮರು ವಿಚಾರಣೆ:- ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
**ಮೈಸೂರು**